ಒಂದೇ ಒಂದೇ ಒಂದೇ!
ಕರ್ನಾಟಕವೊಂದೇ! — ಅಖಂಡ
ಕರ್ನಾಟಕ ಪ್ರಜ್ಞೆ ಮೂಡಿಸಿದ ಕವಿ
ದ.ರಾ. ಬೇಂದ್ರೆ





ಸಾಹಿತಿಗಳು, ಕಲಾವಿದರು, ಪತ್ರಕರ್ತರು ಕನ್ನಡ ಭಾಷೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ಬೀದಿಗಿಳಿದ ಚಳವಳಿಯಾಗಿ ಕನ್ನಡದ ಹೊಸ ಪ್ರಜ್ಞೆಯನ್ನು ಮೂಡಿಸಿದ 'ಗೋಕಾಕ್ ಚಳವಳಿ'ಯಲ್ಲಿ ಜನರನ್ನು ಉದ್ದೇಶಿಸಿ ಮಾತನಾಡುತ್ತಿರುವ ರಾಜಕುಮಾರ್
ಚಿತ್ರ: ಭವಾನಿ ಲಕ್ಷ್ಮೀನಾರಾಯಣ

ದಿಕ್ಕನ್ನು ಸ್ಪಷ್ಟವಾಗಿ ಸೂಚಿಸಲೆತ್ನಿಸಿವೆ.

ಆದರೆ, ಕೆಲವೇ ಸಾವಿರ ಪ್ರತಿಗಳು ಅಚ್ಚಾಗುವ ಸಾಹಿತ್ಯ ಕೃತಿಗಳ ಮೂಲಕ ಚಳವಳಿಗಳು ಹಬ್ಬಲು ಸಾಧ್ಯವೇ ಎಂದು ಪ್ರಶ್ನಿಸುವ ಸಂದೇಹಿಗಳಿದ್ದಾರೆ. ಅಂಥವರು ಈ ಬಗೆಯ ಕೃತಿಗಳು ಆಯಾ ಕಾಲದ ಹಾಗೂ ಆನಂತರದ ಸೂಕ್ಷ್ಮ ಲೇಖಕ, ಲೇಖಕಿಯರನ್ನು, ಚಳವಳಿಗಾರರನ್ನು, ಪತ್ರಕರ್ತರನ್ನು, ನಾಯಕರನ್ನು, ಓದುಗರನ್ನು, ಟೀಚರುಗಳನ್ನು, ವಿದ್ಯಾರ್ಥಿಗಳನ್ನು ನಿಧಾನಕ್ಕೆ ಆವರಿಸಿ ಬೆಳೆಯುವ ರೀತಿಯನ್ನು ಗಮನಿಸಬೇಕು. ಕುವೆಂಪು, ಬೇಂದ್ರೆಯವರ ಭಾವಗೀತೆಗಳನ್ನು ಗಾಯಕ ಗಾಯಕಿಯರು ಹಾಡಿದಾಗ ಕೂಡ ಅವುಗಳ ಆಶಯ, ಪ್ರಭಾವಗಳು ಜನರ ಭಾವನಾಲೋಕದಲ್ಲಿ ಹಬ್ಬತೊಡಗಿದ್ದನ್ನು ಕೂಡ ಮರೆಯಬಾರದು. ಕರ್ನಾಟಕದ ಏಕೀಕರಣ ಚಳವಳಿಯ ಘಟ್ಟದಲ್ಲಿ ಕಾಳಿಂಗರಾಯರು ಹಾಡುತ್ತಿದ್ದ ಬೇಂದ್ರೆಯವರ 'ಒಂದೇ ಒಂದೇ ಒಂದೇ! ಕರ್ನಾಟಕವೊಂದೇ!' ಅಥವಾ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಮೊದಲಾದ ಭಾವಗೀತೆಗಳ ಧ್ವನಿಮುದ್ರಿಕೆಗಳು ಕೂಡ ಕನ್ನಡ ಚಳವಳಿ ಹಬ್ಬಲು ನೆರವಾಗಿದ್ದವು.

ಕನ್ನಡ ಸಾಹಿತ್ಯ ಕೆಲವೊಮ್ಮೆ ಸಾಮಾಜಿಕ ಚಳವಳಿಗಳ ಆಶಯಗಳಲ್ಲಿ, ಘೋಷಣೆಗಳಲ್ಲಿ ಎದ್ದು ಕಾಣದ ಸಂಕೀರ್ಣ ಹೊಳಹುಗಳನ್ನೂ ಸೂಚಿಸಲೆತ್ನಿಸಿದೆ; ತಾತ್ವಿಕ ಪರಿಕಲ್ಪನೆಗಳಿಗೆ ಹೊಸ ಅರ್ಥಗಳನ್ನು ಕೊಟ್ಟಿದೆ. ಗಾಂಧೀಜಿ 'ಸರ್ವೋದಯ' ಕಲ್ಪನೆಯನ್ನು ರೂಪಿಸಿದಾಗ, ಕುವೆಂಪು ಅವರ 'ಶ್ರೀಸಾಮಾನ್ಯರ ದೀಕ್ಷಾಗೀತೆ' ಗಾಂಧೀ ಚಿಂತನೆಯ ಆಚೆಗೂ ಸರ್ವೋದಯದ ಅರ್ಥವನ್ನು ವಿಸ್ತರಿಸುತ್ತದೆ:

ಕೊನೆಗಂಡಿತು ಓರೋರ್ವರ ಗರ್ವದ ಕಾಲ
ಇದು ಸರ್ವರ ಕಾಲ
ಮೇಲಿಲ್ಲವೊ ಕೀಳಿಲ್ಲವೊ ಸರ್ವ ಸಮಾನದ
ರಾಜ್ಯ.

ಅಂದರೆ, ಕುವೆಂಪು ಕವಿತೆ ಸರ್ವೋದಯದ ಪ್ರತಿಭಟನೆಯನ್ನು ಬ್ರಿಟಿಷ್ ಸರ್ಕಾರದ ವಿರುದ್ಧವೂ, ಇಂಡಿಯಾದ ಜಾತಿಪೀಡಿತ ಸಮಾಜದ ವಿರುದ್ಧವೂ ತಿರುಗಿಸಲೆತ್ನಿಸುತ್ತದೆ; ಜೊತೆಗೆ, ಆಗ ಕೇಳಿಬರುತ್ತಿದ್ದ ಸರ್ವಸಮಾನತೆಯ ಕಮ್ಯುನಿಸ್ಟ್ ಆಶಯವನ್ನೂ ಮಂಡಿಸಲೆತ್ನಿಸುತ್ತದೆ.

## 2

## ದನಿ, ಮರುದನಿ, ಹೊಸ ದನಿ

ಆ ಕಾಲದಲ್ಲೇ ಕುವೆಂಪು ಅವರ 'ನೇಗಿಲಯೋಗಿ' ಪದ್ಯದಲ್ಲಿ ಮೂಡಿ ಬಂದ 'ಯೋಗಿ'ಯ ಹೊಸ ವ್ಯಾಖ್ಯಾನ 'ಯೋಗಿ' ಎಂಬ ಪದದ ಹಳೆಯ ಜಡ ಅರ್ಥವನ್ನೇ ಒಡೆದು ಹಾಕಿ ರೈತಾಪಿ ವರ್ಗದ ತ್ಯಾಗ, ಶಕ್ತಿ, ಸಾಧ್ಯತೆಗಳ ಅಪೂರ್ವ ವಾಸ್ತವಚಿತ್ರವೊಂದನ್ನು ತೋರಿಸಿತು. ಅತ್ತ ಅವರ 'ಧನ್ವಂತರಿಯ ಚಿಕಿತ್ಸೆ' ಕತೆ ರೈತನ ಮೇಲೆ ನಡೆಯುವ ದಮನವನ್ನೂ ವಿಶ್ಲೇಷಿಸುತ್ತಿತ್ತು. 'ನೇಗಿಲಯೋಗಿ' ಮುಂದೆ ನಾಡಿನ ರೈತರ ಹಾಡಾಯಿತು; ಕನ್ನಡನಾಡಿನ ಅಧಿಕೃತ ರೈತಗೀತೆಯಾಯಿತು. 'ನೇಗಿಲಯೋಗಿ'ಗೂ